Estd. 1994-95 "ಕಾಯಕದಿಂದ ಬಂದದ್ದು ಲಿಂಗಕ್ಕೆ ಅರ್ಪಿತ" College Code:1241/A09GBE0031
ಶ್ರೀ ಶರಣ ನೂಲಿಯ ಚಂದಯ್ಯ Tel.:0836-2244566

ಶ್ರೀ ಶರಣ ನೂಲಿಯ ಚಂದಯ್ಯ ಡಾ|| ಬಿ. ಆರ್. ಅಂಬೇಡ್ಕರ್ ಸ್ಮಾರಕ
ಎ.ಕೆ.ಕೆ. ಶಿಕ್ಷಣ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ
ಗಂಗಾಧರನಗರ, ಹುಬ್ಬಳ್ಳಿ - 580 020 ತಾ: ಹುಬ್ಬಳ್ಳಿ ಜಿಲ್ಲಾ : ಧಾರವಾಡ ರಾಜ್ಯ : ಕರ್ನಾಟಕ

SHRI SHARANA NOOLIYA CHANDAYYA
Dr. B. R. AMBEDKAR SMARAKA A.K.K. EDUCATION
SOCIETY'S ARTS & COMMERCE COLLEGE
GANGADHARNAGAR, HUBBALLI - 580 020. TQ.: HUBBALLI DIST.: DHARWAD STATE : KARNATAKA
Affilated to Karnatak University Dharwad
**Accredited By NAAC with "B" Grade**
Founder President : Late Shri K. G. GOKAK M.A., L.L.B. (Spl)
E-mail : ssncdrbrambedkar@gmail.com Website : www.ssncdrbraakkdegreecollege.in



Ref. No. SSNC/AcC/workshop/24-25 Date : 09-04-2025

### "ಭಾರತೀಯ ಜ್ಞಾನ ಪದ್ಧತಿ"- ರಾಜ್ಯ ಮಟ್ಟದ ಕಾರ್ಯಗಾರದ ವರದಿ

ದಿನಾಂಕ: 08.4.2025 ರಂದು ನಮ್ಮ ಮಹಾವಿದ್ಯಾಲಯದಲ್ಲಿ ಆಂತರಿಕ ಗುಣಮಟ್ಟ ಭದ್ರತಾ ಕೋಶದಡಿಯಲ್ಲಿ ಕನ್ನಡ, ಇಂಗ್ಲೀಷ, ಹಿಂದಿ ಹಾಗೂ ಮಹಿಳಾ ಸಬಲೀಕರಣ ಕೋಶದಿಂದ ಆಯೋಜಿಸಿದ **"ಭಾರತೀಯ ಜ್ಞಾನ ಪದ್ಧತಿ"** ವಿಷಯದ ಮೇಲೆ ಒಂದು ದಿನದ ರಾಜ್ಯ ಮಟ್ಟದ ಕಾರ್ಯಗಾರವನ್ನು ಶ್ರೀ ಜಿ.ಕೆ.ಗೋಕಾಕ ಕಾರ್ಯದರ್ಶಿಗಳು, ಎ ಕೆ ಕೆ ಶಿಕ್ಷಣ ಸಂಸ್ಥೆ ಹಾಗೂ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಎಮ್. ಕೆ. ಬೆಕ್ಕಿನಕಣ್ಣನವರ ಹಾಗೂ ಶ್ರೀ ಹನುಮಂತಪ್ಪ ಬೆಕ್ಕಿನಕಣ್ಣನವರ ಇವರು ಉದ್ಘಾಟಿಸಿದರು. ಆಶಯ ನುಡಿ ಡಾ ಚಿತ್ರಾ ನಾಯಕ ನಿವೃತ್ತ ಪ್ರಾಂಶುಪಾಲರು,ಶಿಕ್ಷಣ ಮಹಾವಿದ್ಯಾಲಯ ಸೊಲ್ಲಾಪುರ ಇವರು ಭಾರತೀಯ ಜ್ಞಾನ ಪದ್ಧತಿ ತುಂಬಾ ವಿಶಾಲವಾದುದ್ದು; ಪ್ರಾಚೀನ ಕಾಲದಲ್ಲಿ ಗುರುಕುಲ ಪದ್ಧತಿಯಿಂದ ಜ್ಞಾನ ಗಟ್ಟಿಯಾಗುತಿತ್ತು. ಮೆಕಾಲೆ ಶಿಕ್ಷಣ ಪದ್ಧತಿಯಿಂದ ಮಕ್ಕಳು ಜ್ಞಾನಾಭಿವೃದ್ಧಿಯಿಂದ ವಂಚಿತರಾಗುತ್ತಿದ್ದರಿಂದ ಮತ್ತೆ ಗುರುಕುಲ ಶಿಕ್ಷಣ ಪದ್ಧತಿ ಜಾರಿಯಾಗಬೇಕು ಎಂದು ಕರೆಕೊಟ್ಟರು. ಜೊತೆಗೆ ಧರ್ಮ ಮತ್ತು ಮಹಿಳೆ ವಿಷಯದ ಕುರಿತು ನೀಡಿದ ಉಪನ್ಯಾಸದಲ್ಲಿ ಭಾರತದಲ್ಲಿ ಜ್ಞಾನ ಶಾಖೆಗಳಲ್ಲೊಂದಾದ ಧರ್ಮ ಮಹತ್ವ ಸ್ಥಾನ ಪಡಿದಿದೆ. ಜೀವನ ನಿರ್ವಹಣೆ ಧರ್ಮ ಸಂಸ್ಥಾಪಕಳೆ ಮಹಿಳೆ. ಮಹಿಳೆಗೆ ಇಳೆಯಂಥ ಸಹನೆ ಇದೆ. ಸೂರ್ಯನಂಥ ಪ್ರಖರ ಜ್ಞಾನ ತೇಜಸ್ಸನ್ನು ಹೊಂದಿದ್ದಾಳೆ. ಧಾರ್ಮಿಕ ಹಾಗೂ ಮಾನವೀಯ ಧರ್ಮ ಪರಿಪಾಲಕಳು ಮಹಿಳೆಯಾಗಿದ್ದಾಳೆಂದು ಹೇಳಿದರು. ಅಧ್ಯಕ್ಷೀಯ ಭಾಷಣ ಮಾಡಿದ ಪ್ರಾಂಶುಪಾಲರಾದ ಶ್ರೀ ಪಿ.ಬಿ.ಕಾಮಣ್ಣವರ ಜ್ಞಾನ ಪರಂಪರೆ ಕುರಿತು ತಿಳಿಸಿದರು. ಸ್ವಾಗತ ಡಾ.ಸ್ವಪ್ನಾ ಜಾಧವ, ಪ್ರಸ್ತಾವನೆ ನುಡಿ ಡಾ.ಸವಿತಾ ಕೊಟಬಾಗಿ, ವಂದನೆ ಡಾ ಶೀಲಾ ಭಾಷ್ಕರ, ನಿರೂಪಣೆ ಶ್ರೀ ಪಿ.ಎಸ್.ಚಪ್ಪರಮನಿ, ಪ್ರಾರ್ಥನೆ ದೇವಕ್ಕ ರುದ್ರಾಕ್ಷಿ ಬಿ.ಎ 2 ಸೆಮ್ ವಿದ್ಯಾರ್ಥಿನಿ ಮಾಡಿದರು.

ಎರಡನೆಯ ಗೋಷ್ಠಿಯಲ್ಲಿ ಹಾವೇರಿಯ ಕೆ.ಎಲ್.ಇ ಸಂಸ್ಥೆಯ ಗುದ್ಲೆಪ್ಪ ಹಳ್ಳಿಕೇರಿ ಮಹಾವಿದ್ಯಾಲಯದ ಹಿಂದಿ ಪ್ರಾಧ್ಯಾಪಕರಾದ ಡಾ ಮಹಾದೇವಿ ಕಣವಿ ಅವರು ' ಭಾರತೀಯ ಜ್ಞಾನ ಪದ್ಧತಿ-ಅನುವಾದ' ವಿಷಯದ ಮೇಲೆ ಮಾಡಿದ ಉಪನ್ಯಾಸದಲ್ಲಿ ಸಂಸ್ಕೃತದಲ್ಲಿ ಇದ್ದ ಜ್ಞಾನ ಹಿಂದಿ ಇಂಗ್ಲೀಷ ಭಾಷೆಗಳಿಗೆ ಅನುವಾದಗೊಂಡು ವಿಶ್ವ ಗುರು ಸ್ಥಾನ ಪಡಿದಿದೆಂದು ಹೇಳಿದರು. SJMV ಮಹಾವಿದ್ಯಾಲಯ ರಾಯಪುರದ ಇಂಗ್ಲೀಷ ಪ್ರಾಧ್ಯಾಪಕರಾದ ಶ್ರೀಮತಿ ಛಾಯಾ ಹುಬ್ಬಳ್ಳಿ ಅವರು " ಭಾರತೀಯ ಜ್ಞಾನ ಪದ್ಧತಿ: ಉದಯೋನ್ಮೂಖಿ ಪ್ರವೃತ್ತಿಗಳು" ಎಂಬ ವಿಷಯದ ಕುರಿತು ನೀಡಿದ ಉಪನ್ಯಾಸದಲ್ಲಿ 195 ರಾಷ್ಟ್ರಗಳಲ್ಲಿ ಭಾರತ ಏಳನೆಯ ಸ್ಥಾನದಲ್ಲಿದೆ.ಇದಕ್ಕೆ ಭಾರತೀಯರಲ್ಲಿದ್ದ ಜ್ಞಾನ ಕೌಶಲ್ಯಗಳೇ ಪ್ರಮುಖವಾಗಿದೆ. ಪ್ರಾಚೀನ ಭಾರತದ ಅತ್ಯಮೌಲ್ಯವಾದ ಜ್ಞಾನದ ಶಾಖೆಗಳಾದ ತತ್ವಶಾಸ್ತ್ರ, ಯೋಗ, ಆಯುರ್ವೇದ, ಗಣಿತಶಾಸ್ತ್ರ, ಸಂಖ್ಯಾಶಾಸ್ತ್ರ, ಜೋತಿರವಿಜ್ಞಾನ-ಮುಂತಾದವುಗಳಿಂದ ಭಾರತ ವಿಶ್ವದಲ್ಲಿ ಪ್ರಕಾಶಿಸುತ್ತಿದೆ, ಇಂದು ಎನ್.ಇ.ಪಿ ಶಿಕ್ಷಣ ಈ ಎಲ್ಲ ಜ್ಞಾನ ಕೌಶಲ್ಯಗಳನ್ನು ಮರುಸ್ಥಾಪಿಸಬೇಕೆಂಬ ಗುರಿ ಹೊಂದಿದೆ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಮತ್ತೋರ್ವ ಸಂಪನ್ಮೂಲ ವ್ಯಕ್ತಿಗಳಾದ ಕನ್ನಡ ಪ್ರಾಧ್ಯಾಪಕರಾದ ಡಾ ಪುಷ್ಪಾ ಬಸನಗೌಡರ ಅವರು " ಭಾರತೀಯ ಜ್ಞಾನ ಪದ್ಧತಿ : ವಚನ ಸಾಹಿತ್ಯದಲ್ಲಿ ಮಹಿಳೆ" ಎಂಬ ವಿಷಯದ ಕುರಿತು ನೀಡಿದ ಉಪನ್ಯಾಸದಲ್ಲಿ ಭಾರತದ ಜ್ಞಾನ ಏಕಮುಖವಲ್ಲ; ಅದು ಬಹುಮುಖಿ ಸಂಸ್ಕೃತಿಗಳ ಸ್ವರೂಪ.ಗುರುಕುಲ ಪದ್ಧತಿಯಲ್ಲಿರುವ ಗುರು-ಶಿಷ್ಯರ ಬಾಂಧವ್ಯ ಮರು ಸ್ಥಾಪಿಸಬೇಕಾಗಿದೆ. ಗುರುವಿನ

Scanned with OKEN Scanner

ಮೂಲಕ ಜ್ಞಾನಾಮೃತ ಸವಿದ ಶಿಷ್ಯ ಮತ್ತೊಂದು ಜ್ಞಾನ ಪರಂಪರೆ ಸೃಷ್ಟಿಸುತ್ತಿದ್ದ. ವಚನ ಸಾಹಿತ್ಯವು ಜ್ಞಾನಗಳ ಅರಿವು ಮೂಡಿಸುತ್ತದೆ. ಕಾಯಕ-ದಾಸೋಹ ಎಂಬ ಪರಿಕಲ್ಪನೆ ಅರ್ಥಶಾಸ್ತ್ರಜ್ಞರಿಂದ ಶ್ಲಾಘನಿಯಗೊಂಡು ವಿಶ್ವಕ್ಕೆ ಕೊಡುಗೆ ನೀಡಿದೆ. ಇನ್ನು ಶರಣೆಯರು ರಚಿಸಿದ ವಚನಗಳಲ್ಲಿ ಕಾಯಕ, ದಾಸೋಹ, ಪ್ರಾಮಾಣಿಕತೆ, ನಿಷ್ಠೆ ಮುಂತಾದ ಮೌಲ್ಯಗಳಿಂದ ಜೀವನ ನಿರ್ವಹಣೆಗೊಂಡಿದೆ. ಶಿವಶರಣೆಯರು ರಚಿಸಿದ ವಚನಗಳು ನೈತಿಕಜ್ಞಾನ, ಧಾರ್ಮಿಕ ಜ್ಞಾನ, ಆರ್ಥಿಕ ಜ್ಞಾನಗಳಿಂದ ಜೀವನ ನಿರ್ವಹಣೆಯ ಸ್ವರೂಪ ತಿಳಿಸುತ್ತವೆ ಎಂದು ಹೇಳಿದರು. ಮತ್ತೋರ್ವ ಸಂಪನ್ಮೂಲ ವ್ಯಕ್ತಿಗಳಾದ SJMV ಮಹಾವಿದ್ಯಾಲಯ ರಾಯಪುರದ ಹಿಂದಿ ಪ್ರಾಧ್ಯಾಪಕರಾದ ಶ್ರೀಮತಿ ಎಂ.ಬಿ.ಅಲಗವಾಡಿ  ಅವರು "ಭಾರತೀಯ ಜ್ಞಾನ ಪದ್ಧತಿ:ಹಿಂದಿ ಕಾವ್ಯ ಕುರಿತು ಉಪನ್ಯಾಸ ನೀಡಿದರು.

ಸಮಾರೋಪ ಸಮಾರಂಭದಲ್ಲಿ ವಿದ್ಯಾರ್ಥಿಗಳಿಂದ ವಿವಿಧ ಕಾರ್ಯಚಟುವಟಿಕೆಗಳನ್ನು ಮಾಡಿಸಿ, ಸ.ಪ್ರಕಾ .ಅಣ್ಣಿಗೇರಿ ಸಹಪ್ರಾಧ್ಯಾಪಕರಾದ ಅಣ್ಣಪ್ಪ ರೊಟ್ಟಿಗವಾಡ ಹಾಗೂ ವಿವಿಧ ಕಾಲೇಜುಗಳಿಂದ ಬಂದ ವಿದ್ಯಾರ್ಥಿಗಳಾದ ಅಶ್ವಿನಿ, ಸ.ಪ್ರಕಾ .ಅಣ್ಣಿಗೇರಿ, ಸಿದ್ದು ಕಿಟಲ್ ಕಾಲೇಜು, ಸುಶ್ಮೀತಾ ಜೆಎಸ್.ಎಸ್ ಕಾಲೇಜು ಧಾರವಾಡ ಇವರ  ಕಾರ್ಯಾಗಾರ ಕುರಿತು ತಮ್ಮ ಅನಿಸಿಕೆಗಳನ್ನು ಹೇಳಿದರು. ಅತಿಥಿಯಾಗಿ ಡಾ ಚಿತ್ರಾ ನಾಯಕ ಇಂದಿನ ಕಾರ್ಯಗಾರದ ಸದಪಯೋಗ ಪಡಿಸಿಕೊಳ್ಳಬೇಕೇಂದು ಕರೆ ಕೊಟ್ಟರು. ವಂದನಾರ್ಪಣೆಯನ್ನು ಪ್ರಾಚಾರ್ಯರಾದ ಶ್ರೀ ಪಿ.ಬಿ ಕಾಮಣ್ಣವರ ಮಾಡಿದರು. ನಂತರ ರಾಷ್ಟ್ರಗೀತೆ ಹೇಳಲಾಯಿತು.ಸದರಿ ಕಾರ್ಯಾಗಾರದಲ್ಲಿ ಭಾಗವಹಿಸಿದ ಎಲ್ಲರಿಗೂ ಪ್ರಮಾಣಪತ್ರಗಳನ್ನು ವಿತರಿಸಲಾಗಿತು.

09/04/2025
CO-ORDINATOR
IQAC
S. S. N. C. Dr. B. R. Ambedkar Smaraka
A.K.K. Education Society's
Arts and Commerce College
Gangadharnagar, HUBBALLI-20.

09/04/25
PRINCIPAL
S. S. N. C. Dr. B. R. Ambedkar Smaraka
A.K.K. Education Society's
Arts and Commerce College
Gangadharnagar, HUBBALLI-20.

Scanned with OKEN Scanner